**ಪಿ.ಡಬ್ಲ್ಯುಃ 1**

**ದಿಃ 07-08-2026 ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

**ಪಾಟೀ ಸವಾಲು ಃ 13 ನೇ ಆರೋಪಿತನ ಪರವಾಗಿ ಶ್ರೀ ಕೆ ಎಲ್ ಪಿ ವಕೀಲರಿಂದಃ**

1. ನಾನು ಹಾಜರ ಪಡಿಸಿರುವ ದಾಖಲಾತಿಗಳು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಆಸ್ತಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರ ಪಡಿಸಿರುತ್ತೇನೆ ಎಂದರೆ ಸರಿ. ನಾನು ಓ ಎಸ್ ನಂ 490/96 ನ್ನು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡರವರ ವಿರುದ್ಧ ಶಾಸಕ ನಿರ್ಭಂದಕಾಜ್ಞೆಯನ್ನು ಕೇಳಿ ದಾವೆಯನ್ನು ಸಲ್ಲಿಸಿರುತ್ತೇನೆ. ನಾನು ಈ ದೂರನ್ನು ದಾಖಲಿಸುವ ಸಮಯದಲ್ಲಿ 13 ನೇ ಆರೋಪಿತರನು ಕರ್ನಾಟಕ

ವಿಶ್ವವಿದ್ಯಾಲಯ ಧಾರವಾಡನ ರಜಿಸ್ಟರ ಎಂದು ಕೆಲಸ ಮಾಡುತ್ತಿದ್ದರು ಅವರು ಯಾವ ಅವಧಿಯವರೆಗೆ ಕೆಲಸ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. 13 ನೇ ಆರೋಪಿತನು ಯಾವ ಅವಧಿಯಿಂದ ಯಾವ ಅವಧಿಗೆ ಜಿಲ್ಲಾಧಿಕಾರಿಗಳು ಎಂದು ಕರ್ತವ್ಯನಿರ್ವಹಿಸಿದ್ದರು ಎಂದು ನನಗೆ ಗೊತ್ತಿಲ್ಲ. 13 ನೇ ಆರೋಪಿತರು ಐ. ಎ. ಎಸ್ ಅಧಿಕಾರಿ ಅಂದರೆ ಸರಿ.

2. ನನ್ನ ದಾವೆಯ ಸಲುವಾಗಿ 13 ನೇ ಆರೊಪಿತರಿಗೆ ಭೇಟಿಯಾಗುವುದಾಗಿ ಅಥವಾ ಪತ್ರ ವ್ಯವಹಾರ ಆಗಲಿ ನಾನು ಮಾಡಿರುವುದಿಲ್ಲ. ನನಗೆ ಭೂಮಾಪನ ಕಚೇರಿಯಿಂದ ಸಂಬಂಧಪಟ್ಟ ಭೂಮಾಪನದ ದಾಖಲೆಗಳು ಬೇಕಾಗಿದ್ದವು ಎಂದರೆ ಸರಿ. ಭೂಮಾಪನ ದಾಖಲೆಗಳು ಸಿ ಟಿ ಸರ್ವೆ ಕಚೇರಿಯಲ್ಲಿ ಮತ್ತು ಡಿಡಿಎಲ್ ಆರ್ ಕಚೇರಿಗಳಲಿಲ ಲಭ್ಯ ಇರುತ್ತವೆ ಎಂದರೆ ಸರಿ. ಯಾರಿಗಾದರೂ ಭೂಮಾಪನದ ದಾಖಲೆಗಳು ಅವಶ್ಯಕತೆ ಇದ್ದರೆ ಭೂಮಾಪನ ಕಚೇರಿಗೆ ಅರ್ಜಿಯನ್ನು ಸಲ್ಲಿಸಿ ದಾಖಲೆಗಳನ್ನು ಪಡೆದುಕೊಳ್ಳುತ್ತಾರೆ ಎಂದರೆ ಸರಿ. 13 ನೇ ಆರೋಪಿತನ ಪಾತ್ರವು ಈ ಪ್ರಕರಣದಲ್ಲಿ ಏನು ಇದೆ ಎಂದರೆ ಅವರು ಮೋಸ ಮತ್ತು ಕಪಟತನದಿಂದ 12 ನೇ ಆರೋಪಿತರಿಗೆ ದಿನಾಂಕ 09.11.1998 ರಂದು ಪತ್ರ ಬರೆದಿರುತ್ತಾರೆ ಆದ ಕಾರಣದಿಂದ ಆರೋಪಿತರು ಎಂದು ಕಾಣಿಸಿರುತ್ತೇನೆ. ನಾನು ಹೇಳುವ ಪತ್ರ ದಿನಾಂಕ 09.11.1998 ನ್ನು ಈ ಪ್ರಕರಣದಲ್ಲಿ ಹಾಜರ ಪಡಿಸಿರುತ್ತೇನೆ ಸದರಿ ದಾಖಲೆಯನ್ನು ಈಗಾಗಲೆ ನಿಪಿ-1 ಎಂದು ಗುರುತಿಸಲಾಗಿದೆ. ನಿಪಿ-1 ಮತ್ತು ನಿಪಿ-49 ಎರಡು ದಾಖಲೆಗಳು ಒಂದೆ ದಾಖಲೆಗಳು ಇರುತ್ತವೆ ಎಂದರೆ ಸರಿ. ಆ ಎರಡು ಪತ್ರಗಳಲ್ಲಿ ಉಲ್ಲೇಖ ಇರುವ ಅಂಶ ಏನೆಂದರೆ ದಿನಾಂಕ 01.08.1998 ರ ಪತ್ರಕ್ಕೆ ಪ್ರತ್ಯುತ್ತರವಾಗಿ ರಜಿಸ್ಟರ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರಿಗೆ ಬರೆದ ಪತ್ರ ಇರುತ್ತದೆ. ರಜಿಸ್ಟರ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರು ದಿನಾಂಕ 01.08.19 98 ರವರು ಜಿಲ್ಲಾಧಿಕಾರಿಗಳಿಗೆ ಯಾವ ಮಾಹಿತಿಯನ್ನು ಕೋರಿ ಪತ್ರವನ್ನು ಬರೆದಿದ್ದರು ಎಂಬ ದಾಖಲೆಯನ್ನು ನಾನು ಪಡೆದುಕೊಂಡಿರುವುದಿಲ್ಲ ಮತ್ತು ನಾನು ನೋಡಿರುವುದಿಲ್ಲ. ಆ ಪತ್ರದಲ್ಲಿ ಜಿಲ್ಲಾಧಿಕಾರಿಯವರು ಅಂದರೆ 13 ನೇ ಆರೋಪಿತರು ಭೂದಾಖಲೆಗಳಿಗೆ ಸಂಬಂಧಪಟ್ಟ ದಾಖಲೆಗಳು ಸಹಾಯಕ ನಿರ್ದೇಶಕರು ಭೂದಾಖಲೆಗಳು ಧಾರವಾಡರವರಲ್ಲಿ ಅರ್ಜಿ ಸಲ್ಲಿಸಿ ಪಡೆದುಕೊಳ್ಳಬಹುದೆಂದು ತಿಳಿಸಿರುತ್ತಾರೆ ಎಂದರೆ ಸರಿ. ಅರೋಪಿ 13 ರವರ ಬಗ್ಗೆ

ನಿಸಿ–1 ಮತ್ತು 49 ರ ಪತ್ರಗಳಲ್ಲಿ ಮೋಸ ಮತ್ತು ಕಪಟತನದ ಬಗ್ಗೆ ಏನು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಉತ್ತರಿಸಿದ ನಂತರ ಮುಂದುವರೆದು 13 ನೇ ಆರೋಪಿತರು ಮೊದಲಿಗೆ ರಜಿಸ್ಟರ ಅಂತಾ ಇದ್ದು ನಂತರ ಜಿಲ್ಲಾಧಿಕಾರಿ ಆಗಿರುತ್ತಾರೆ ಅದರ ಪ್ರಭಾವದ ಮೇಲೆ ಕರ್ನಾಟಕ ವಿಶ್ವಾವಿದ್ಯಾಲಯದವರಿಗೆ ಪತ್ರವನ್ನು ಬರಸಿದ್ದಾರೆ ಎಂದು ನುಡಿದಿರುತ್ತಾರೆ. ಮೊದಲು 13 ನೇ ಆರೋಪಿತರು ರಜಿಸ್ಟರ ಆಗಿದ್ದರು ನಂತರ ಜಿಲ್ಲಾಧಿಕಾರಿ ಆದ ಮೇಲೆ ಅವರ ಪ್ರಭಾವ ಬಿರಿ ರಜಿಸ್ಟರ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡರವರಿಗೆ ಪತ್ರವನ್ನು ಬರೆದ ಬಗ್ಗೆ ಸಾಕ್ಷ್ಯ ಪುರಾವೆಗಳು ಇರುವುದಿಲ್ಲ. ಪ್ರಭಾವ ಬಿರಿ 13 ನೇ ಆರೋಪಿತನು ಪತ್ರವನ್ನು ಬರೆದಿರುತ್ತಾನೆ ಎಂಬ ವಿಷಯವನ್ನು ದೂರಿನಲ್ಲಿ ಕಾಣಿಸಿರುವುದಿಲ್ಲ ಎಂದರೆ ನನ್ನ ದೂರಿನ ಪ್ಯಾರ ನಂ 70 ರಲ್ಲಿ ಕಾಣಿಸಿರುತ್ತೇನೆ. ನಾನು ನನ್ನ ದೂರಿನಲ್ಲಿ ಹಾಗೆಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತ ನಂ 1, 5, 12 ಮತ್ತು 14 ರವರು 13 ನೇ ಆರೋಪಿತರ ಅವರ ಅಧಿನದಲ್ಲಿ ಕೆಲಸ ಮಾಡುವ ಅಧಿಕಾರಿಗಳು ಇರುವುದಿಲ್ಲ ಎಂದರೆ ಸರಿ. ಆದ್ದರಿಂದ 13 ನೇ ಆರೋಪಿತನು ಆರೋಪಿ 1, 5, 12 ಮತ್ತು 14 ರವರ ಮೇಲೆ ಪ್ರಭಾವ ಬಿರುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸರಿಯಲ್ಲ.

3. ದಿನಾಂಕ 18.02.1999 ರಲ್ಲಿ ಗ್ರಾಮ ಲೆಕ್ಕಾಧಿಕಾರಿಯವರು ನಕಾಶೆಯನ್ನು ಪುರೈಸುತ್ತಿಲ್ಲ ಮತ್ತು ಅಧಿಕಾರ ವ್ಯಾಪ್ತಿ ಇಲ್ಲ ಎಂದು ಹೇಳಿದ ಬಗ್ಗೆ ಕೇಳಿ 13 ನೇ ಆರೋಪಿತರಿಗೆ ಪತ್ರವನ್ನು ಬರೆದಿದ್ದೇನೆ ಎಂದರೆ ಸರಿ. ನಿಸಿ–30 ರಂತೆ ನಮ್ಮ ವಕೀಲರು ಜಿಲ್ಲಾಧಿಕಾರಿಯವರಿಗೆ ದಿನಾಂಕ 10.01.1964 ರ ಪತ್ರದ ಪ್ರತಿಯನ್ನು ಪೂರೈಸಲು ಕೇಳಿದ್ದರು ಎಂದರೆ ಸರಿ. ಜಿಲ್ಲಾಧಿಕಾರಿಯವರ ಪರವಾಗಿ ದಿನಾಂಕ 17.03.1997 ರಂದು ಪ್ರತ್ಯುತ್ತರ ಬಂದಿತ್ತು ಎಂದರೆ ಸರಿ. ಜಿಲ್ಲಾಧಿಕಾರಿಯವರ ಪರವಾಗಿ ಸಹಿ ಮಾಡಿರುವ ಅಧಿಕಾರಿಯು ಕೇಳಿರುವ ದಾಖಲೆಯು ನಮ್ಮ ಅಧಿಕಾರಿ ವ್ಯಾಪ್ತಿಗೆ ಬರುವುದಿಲ್ಲ ಎಂದು ತಿಳಿಸಿದ್ದರು ಎಂದರೆ ಸರಿ. ದಿನಾಂಕ 17.03.1997 ರ ಪ್ರತ್ಯುತ್ತರದಲ್ಲಿ ಸಹಿ ಮಾಡಿದ ಅಧಿಕಾರಿಯು ಮತ್ತು ಆರೋಪಿ 13 ಬೇರೆ ಬೇರೆ ಎಂದರೆ ಸರಿ.

4. ಓ ಎಸ್ ನಂ 490/1996 ರಲ್ಲಿ 13 ನೇ ಆರೋಪಿತರು ನೇರವಾಗಿ ಯಾವುದೆ ದಾಖಲೆಗಳನ್ನು ಹಾಜರ ಪಡಿಸಿರುವುದಿಲ್ಲ ಎಂದರೆ ಸರಿ. ಆದರೆ 12 ನೇ ಆರೋಪಿತರು ಸಲ್ಲಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ 4 ನೇ ಪ್ಯಾರಾದಲ್ಲಿ 13 ನೇ

ಆರೋಪಿತರಿಗೆ ಖೊಟ್ಟಿ ದಾಖಲೆಗಳು ಇರುತ್ತವೆ ಎಂದು ಗೊತ್ತಿದ್ದರೂ ಸಹ ಆರೋಪಿ 12 ರವರಿಗೆ ಪತ್ರವನ್ನು ಬರೆದಿರುತ್ತಾರೆ ಎಂದು ಸುಳ್ಳು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ಪ್ಯಾರಾದಲ್ಲಿ 13 ಮತ್ತು 12 ನೇ ಆರೋಪಿತರಿಗೆ ಖೊಟ್ಟಿ ದಾಖಲೆಗಳು ಇರುವ ವಿಷಯ ಅವರಿಗೆ ಗೊತ್ತಿತ್ತು ಎಂದು ಹೇಳಿರುವ ವಿಷಯ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ದಿನಾಂಕ 15.04.2026 ರಂದು ಸದರಿ ಪತ್ರವನ್ನು ನ್ಯಾಯಾಲಯವು ನಂಬಬೇಕು ಎಂದು ಹೇಳಿ ಅದನ್ನು ಸೃಷ್ಟಿ ಮಾಡಿರುತ್ತಾರೆ ಎಂದು ಹೇಳಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. 13 ನೇ ಆರೋತಪಿರು ಅವರ ಕಚೇರಿಯಲ್ಲಿ ಲಭ್ಯ ಇರುವ ಮಾಹಿತಿ ಪ್ರಕಾರ ಪತ್ರನ್ನು ಬರೆದಿರುತ್ತಾರೆ ಅದರಲ್ಲಿ ಯಾವುದ ಮೋಸ ಮತ್ತು ಕಪಟ ಇರುವುದಿಲ್ಲ ಎಂದರೆ ಸರಿಯಲ್ಲ. ಕರ್ನಾಟಕ ವಿಶ್ವವಿದ್ಯಾಲಯದವರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಅವರನ್ನು ಹೆದರಿಸುವ ಸಲುವಾಗಿ 13 ನೇ ಆರೋಪಿತರನ್ನು ಆರೋಪಿತನನ್ನಾಗಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 1, 6, 8, 10, 12 ಮತ್ತು 15 ರ ಪರವಾಗಿ ಶ್ರೀ ಎ ಸಿ ಸಿ ವಕೀಲರಿಂದ ಃ**

ಶ್ರೀ ಎಸ್ ಎಸ್ ಎಂ ವಕೀಲರು ಶ್ರೀ ಎ ಸಿ ಸಿ ವಕೀಲರ ಪರವಾಗಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೆ. ಸರಿ ಇದೆ.** **ನನ್ನ ಸಮಕ್ಷಮ**

**ಪ್ರಧಾನ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.**

**ಸಿ.ಸಿ. ನಂಬರ್‍ಃ 250/2010**

**ಪಿ.ಡಬ್ಲ್ಯುಃ 1**